ಎಲ್ಲರೂ ಮುಂದೆ ಸಾಗಿದರು. ಅಷ್ಟರಲ್ಲಿ ಎದುರಿನಿಂದ ಒಬ್ಬ ಕುಷ್ಠರೋಗಿ ಇವರೆಡೆಗೆ ಬಂದವನು, ಸ್ವಾಮೀಜಿಗೆ ಮೈತಾಗಿಸಿಕೊಂಡೇ ಮುಂದೆ ಹೋದ. ಸ್ವಾಮೀಜಿಯ ಕೋಪ ನೆತ್ತಿಗೇರಿತ್ತು. ನನ್ನಂಥ ಪರಮ ಪುಣ್ಯವಂತನ ಮೈ ಸೋಕುವಷ್ಟು ಸೊಕ್ಕೇ ಈ ರೋಗಿಷ್ಠನಿಗೆ? ಥೂ ಪಾಪಿ, ದೂರ ಸರಿ, ನೀನೊಬ್ಬ ಕುಷ್ಠರೋಗಿ, ಜನ್ಮ ಜನ್ಮಾಂತರದ ಪಾಪಗಳಿಂದ ಹೀಗಾಗಿದ್ದೀಯ. ನನ್ನಂಥ ವಿದ್ವಾಂಸ ಪುನೀತನನ್ನು ಮುಟ್ಟುವಷ್ಟು ಅಹಂಕಾರವೇ ನಿನಗೆ? ನಿನಗೆ ನರಕವೇ ಗಟ್ಟಿ ಅವರ ಮಾತಿಗೆ ಬೆದರಿದ ಆ ರೋಗಿಯನ್ನು ಕಳ್ಳ ಸಮಾಧಾನಿಸಿ ತನ್ನ ಕಿಸೆಯಲ್ಲಿ ಉಳಿದಿದ್ದ ಪೂರ್ಣ ಹಣವನ್ನು ಕೊಟ್ಟು ತಲೆ ಸವರಿದ. ಅಷ್ಟರಲ್ಲಾಗಲೇ ನರಕದ ಮಹಾದ್ವಾರ ಬಂದಿತ್ತು. ಯಮದೂತರು ಇಬ್ಬರನ್ನೂ ಕರೆದೊಯ್ದು ಯಮರಾಜನ ಮುಂದೆ ನಿಲ್ಲಿಸಿದರು. ಇಬ್ಬರನ್ನೂ ನೋಡಿ ಯಮಧರ್ಮ ತೀರ್ಪು ನೀಡಿದ. ಈ ಸ್ವಾಮೀಜಿಗೆ ಕುದಿಯುವ ಎಣ್ಣೆಯಲ್ಲಿ ಎರಡೂ ಕೈಗಳನ್ನಿಡಿಸಿ ಕಾದ ಭರ್ಚಿಗಳಿಂದ ತಿವಿಯಿರಿ, ಕೆಂಪಿರುವೆಗಳ ಕೋಣೆಯಲ್ಲಿ ಅನ್ನನೀರು ಕೊಡದೇ ಕೊಳೆಯುವಂತೆ ಮಾಡಿ. ಆ ಕಳ್ಳನಿಗೆ ಭರ್ಜರಿ ಔತಣ ನೀಡಿ ಸ್ವರ್ಗಕ್ಕೆ ಕಳಿಸಿ. ಯಮಧರ್ಮನ ತೀರ್ಪಿಗೆ ಹೌಹಾರಿದ ಸ್ವಾಮೀಜಿ ಪ್ರಭು, ಇದು ಅನ್ಯಾಯ, ಜೀವನವೆಲ್ಲ ಕೊಲೆ, ಸುಲಿಗೆ ಮಾಡಿದ ಈ ಕಳ್ಳನಿಗೆ ಸ್ವರ್ಗವಾಸ! ಅನುದಿನ ಪೂಜೆ, ಪುನಸ್ಕಾರ, ಭಗವತ್ ಚಿಂತನೆಗೈದ ನನಗೆ ಕ್ರೂರಶಿಕ್ಷೆಯೇ? ಎಂದು ನುಡಿದರು. ಯಮರಾಜ ಚಿತ್ರಗುಪ್ತನೆಡೆಗೆ ನೋಡಿದ. ಚಿತ್ರಗುಪ್ತ ಕಡತ ನೋಡಿ ಹೇಳಿದ.

ಪ್ರಭು, ಈ ಸ್ವಾಮೀಜಿ ಬಹಿರಂಗದಲ್ಲಿ ಅಪಾರ ದೈವಭಕ್ತಿ ತೋರಿದರೂ ಅಂತರಂಗದಲ್ಲಿ ದೊಡ್ಡ ಆಷಾಢಭೂತಿ. ರಾತ್ರಿ ಬರೀ ಭೋಗದ ಜೀವನ, ಹೆಣ್ಣು, ಹೆಂಡ ಎಲ್ಲವೂ ಬೇಕು. ಹುಂಡಿ ಹಣ ಕದ್ದು ಒಳಗೊಳಗೇ ಭಾರೀ ಗಂಟು ಮಾಡಿದ್ದಾನೆ. ಪಟ್ಟದ ಆಸೆಗಾಗಿ ಹಿರಿಯ ಸ್ವಾಮಿಗಳ ಕುತ್ತಿಗೆ ಹಿಸುಕಿ ಸಾಯಿಸಿ ಎಲ್ಲರನ್ನೂ ವಂಚಿಸಿದ್ದಾನೆ. ಈಗ ಇಲ್ಲಿಗೆ ಬರುವಾಗಲೂ ಇರುವೆಗಳನ್ನು ತುಳಿದಿದ್ದಾನೆ, ಭಿಕ್ಷುಕನನ್ನು ಅಲಕ್ಷಿಸಿದ್ದಾನೆ. ನರಳುತ್ತಿದ್ದ ನಾಯಿಗೆ ಕಲ್ಲೆಸೆದಿದ್ದಾನೆ, ಬಡ ಕುಷ್ಠರೋಗಿಗೆ ಹೀನಾಯವಾಗಿ ನಿಂದಿಸಿದ್ದಾನೆ. ಬದಲಾಗಿ ಈ ಕಳ್ಳ ಅದೆಷ್ಟೇ ಸುಲಿಗೆ ಮಾಡಿದರೂ ದೀನ ದಲಿತರಿಗೆ ಸಹಾಯಗೈದಿದ್ದಾನೆ. ಅನಾಥಾಶ್ರಮಗಳಿಗೆ ದಾನಗೈದಿದ್ದಾನೆ. ದಾರಿಯಲ್ಲಿ ಬರುವಾಗ ನಾವು ಪರೀಕ್ಷಿಸಲು ಸೃಷ್ಟಿಸಿದ ಇರುವೆಗಳು, ಭಿಕ್ಷುಕ, ನಾಯಿ, ಕುಷ್ಠ ರೋಗಿಗೆ ಕರುಣೆ ತೋರಿದ್ದಾನೆ. ಹಾಗಾಗಿ ನೀವು ನೀಡಿದ ಶಿಕ್ಷೆ ನ್ಯಾಯಯುತವಾಗಿದೆ ಪ್ರಭು.

ಕಳ್ಳ ಕೃತಜ್ಞತೆಯಿಂದ ಕೈಮುಗಿದ. ಬುಸುಗುಡುತ್ತಿದ್ದ ಸ್ವಾಮೀಜಿಯನ್ನು ದೂತರು ಕುದಿಯುತ್ತಿದ್ದ ಎಣ್ಣೆ ಬಾಣಲಿಯ ಕಡೆಗೆ ಎಳೆದೊಯ್ದುರು.

ಕಳುಹಿಸಿದವರು

■



ಶಶಿಧರ ಹಳೇಮನಿ

# ಕತ್ತಿಯಿಲ್ಲ ಕೋವಿಯಿಲ್ಲ!

■ ವಾಸುದೇವ ಶರ್ಮಾ ಎನ್.ವಿ.

ಕತ್ತಿಯಿಲ್ಲ ಕೋವಿಯಿಲ್ಲ
ಹಿಂದೆ ಮುಂದೆ ಸೈನ್ಯವಿಲ್ಲ
ಸತ್ಯ ನುಡಿದು ನಡೆದು ನಡೆದು
ಆಂಗ್ಲರನ್ನು ಗೆದ್ದವರು ಗಾಂಧಿ ತಾತ

ಮೂರು ನೂರು ವರ್ಷಕಾಲ
ಆಂಗ್ಲ ಜನರ ಮುಷ್ಟಿಯಲ್ಲಿ
ನರಳಿದವರ ಕಣ್ಣೊರೆಸಲು
ಸತ್ಯ ಮಂತ್ರ ಹಿಡಿದವರು ಗಾಂಧಿ ತಾತ

ಉಪ್ಪು ನೀಲಿಗೆಲ್ಲಾ ತೆರಿಗೆ
ವಿದೇಶೀ ಬಟ್ಟೆಯಿಂದ ಏಕೆ ಸುಲಿಗೆ
ಖಾದಿ ತೊಟ್ಟು ಉಪ್ಪು ಕೊಟ್ಟು
ಬಡವರೊಡಲು ಕಾಪಾಡಿದರು ಗಾಂಧಿ ತಾತ

ಓದು ಬರಹ ಲೆಕ್ಕಾಚಾರ
ಕುಶಲ ಕಲೆಯು ಸೇರಿಕೊಂಡು
ಎಲ್ಲ ಜನರು ಕಲಿಯಲೆಂದು
ಮನಗಳರಳೋ ಬೆಳಕು ತಂದರು ಗಾಂಧಿ ತಾತ

ಹಳ್ಳಿ ಹಾಡಿ ಗ್ರಾಮೋದ್ಯೋಗ
ಬದುಕ ಕೊಡಲು ಬೆಳೆಯಬೇಕು
ಬೆಳೆಸಿ ಬಳಸಿ ಉಳಿಸುತ್ತಲೇ
ಚಿಕ್ಕದರಲೇ ಚೊಕ್ಕವೆಂದರು ಗಾಂಧಿ ತಾತ

ಟಿಪ್ಪಣಿ

- ಮಹಾತ್ಮ ಗಾಂಧಿಯವರ ಮಹತ್ಕಾರ್ಯಗಳ ಕೆಲವು ಮಗ್ಗಲುಗಳನ್ನು ಹಿಡಿದು ಇದರ ರಚನೆ.
- ಗಾಂಧಿಯವರನ್ನು ಕುರಿತು ಮಕ್ಕಳು ಏನು ತಿಳಿದಿದ್ದಾರೆಂದು ಮಾತನಾಡಬಹುದು, ತಿಳಿಸಬಹುದು.